# ಪಾರಂಪರಿಕ ಆಭರಣಕ್ಕೆ ದೈವತ್ವದ ಕಳೆ



**ಪಾರಂಪರಿಕ ಆಭರಣಗಳು ಸಂಪ್ರದಾಯದ ಜತೆಗೆ ಫ್ಯಾಷನ್ ಹಾದಿಯನ್ನೂ ತುಳಿದಿದೆ. ಹೀಗಾಗಿ ಆಭರಣಗಳು ಸಾಂಪ್ರದಾಯಿಕತೆ ಜತೆಗೆ ಆಧುನಿಕ ಸ್ಪರ್ಶವನ್ನೂ ಎಡತಾಕಿಸಿಕೊಂಡಿದೆ.**

★ ಉಮಾ ವೇಣೂರು

ಹೊಂಬಣ್ಣದ ರೇಷ್ಮೆ ಸೀರೆಗೆ ಕಡುಗೆಂಪು ಬಣ್ಣದ ಅಂಚು. ಅದಕ್ಕೊಪ್ಪುವ ಕಡುಬಣ್ಣದ್ದೇ ಚೋಲಿ. ಇಷ್ಟು ಅಂದದ ಉಡುಗೆಯ ಸೊಬಗನ್ನು ಇಮ್ಮಡಿಸುವುದು ಈ ಉಡುಪಿನ ಮೇಲೆ ಹೊನ್ನಿನ ಆಭರಣ ತೊಟ್ಟಾಗಲೇ. ಈ ಸಾಂಪ್ರದಾಯಿಕ ಉಡುಗೆಗೆ ಅಷ್ಟೇ ಪಾರಂಪರಿಕವಾದ ಚಿನ್ನದ ಒಡವೆಗಳೂ ಸೇರಿಕೊಂಡರೆ ಆ ಮಹಿಳೆಗೆ ದೈವತ್ವದ ಕಳೆ ಬರುವುದರಲ್ಲಿ ಸಂಶಯವೇ ಇಲ್ಲ.

ನಮ್ಮ ಪರಂಪರೆಯಲ್ಲಿ ಚಿನ್ನದ ಆಭರಣಗಳಿಗೆ ವಿಶೇಷ ಸ್ಥಾನವಿದೆ. ಹೊನ್ನನ್ನು ಲಕ್ಷ್ಮಿ ಎಂದು ಪೂಜಿಸುವ ಮನೋಭಾವವೂ ಇದೆ. ಪಾರಂಪರಿಕ ಆಭರಣ ಇದೀಗ ಫ್ಯಾಷನ್‌ನ ಹಾದಿ ಹಿಡಿದಿದೆ. ಸಾಂಪ್ರದಾಯಿಕ ಆಭರಣ, ಟೆಂಪಲ್ ಆಭರಣ ಫ್ಯಾಷನ್‌ಗೂ ಸೈ ಎಂಬುದನ್ನು ಸಾಬೀತುಪಡಿಸಿದೆ. ನವನವೀನ ವಿನ್ಯಾಸಗಳ ಆಭರಣ ಕಂಡಾಗ ಮಹಿಳೆಯರ ಮೊಗದಲ್ಲೂ ಅಪರಂಜಿಯಂಥ ನಗು ಚಿಮ್ಮುತ್ತದೆ. ರೇಷ್ಮೆ ಸೀರೆ ಉಟ್ಟಾಗ ತೊಟ್ಟುಕೊಳ್ಳಲೆಂದೇ ದೇವಾನುದೇವತೆಗಳ ಚಿತ್ರವಿರುವ ಆಭರಣಗಳನ್ನು ಮಹಿಳೆ ಇಷ್ಟಪಡುತ್ತಾಳೆ. ಲಕ್ಷ್ಮಿ ಓಲೆ, ಲಕ್ಷ್ಮಿ ಚಿತ್ರವಿರುವ ನೆಕ್ಲೆಸ್, ಬಳೆಗಳು, ಬ್ರೇಸ್ಲೆಟ್‌ಗಳು, ಇಷ್ಟಗಲ ಕಾಸಿನ ಸರ ಎಲ್ಲದರಲ್ಲೂ ಹೊಸ ವಿನ್ಯಾಸಗಳೇ. ಇವೆಲ್ಲವೂ ಕೈಗೆಟಕುವ ಬೆಲೆಯಲ್ಲಿ ಸಿಕ್ಕಿದರಂತೂ ಮಹಿಳೆಗೆ ಸ್ವರ್ಗಕ್ಕೆ ಮೂರೇ ಗೇಣು.

ಹುಡುಗಿ ಚಿಕ್ಕವಳಿರುವಾಗಲೇ ಅಲಂಕಾರಕ್ಕೆ, ಒಡವೆ ವಿನ್ಯಾಸಗಳ ಬಗ್ಗೆ ಒಲವು ಬೆಳೆಸಿಕೊಂಡಿರುತ್ತಾಳೆ. ಇದು ಆಕೆಗೆ ಅಜ್ಜಿ–ಅಮ್ಮಂದಿರ ಬಳುವಳಿಯೂ ಆಗಿರಬಹುದು. ಚಂದದ ಕುಸುರಿ ಇರುವ ಆಭರಣವನ್ನು ಕೊಂಡುಕೊಳ್ಳಲು ತವಕ ಪಡುವ ಮಹಿಳೆಗೆ ಈ ಹೂಡಿಕೆ ಹಿಂದೆ ಚಿನ್ನ ಆಪತ್ಕಾಲದಲ್ಲಿ ನೆರವಾಗುತ್ತದೆ ಎಂಬ ಜಾಗೃತ ಮನಸ್ಸೂ ಇರುತ್ತದೆ.

ಮನಮೋಹಕವಾದ ಪಾರಂಪರಿಕ ಆಭರಣ ಫ್ಯಾಷನ್ ಆಗಿ ಬಂದ ಲಾಗಾಯ್ತಿನಿಂದಲೂ ಚಿನ್ನದ ಜತೆಗೆ ಅತ್ಯಾಕರ್ಷಕ ಕುಂದನ್, ಮಿನಾಕರಿ, ಟೆಂಪಲ್ ಜ್ಯುವೆಲ್ಲರಿ, ಇಟಾಲಿಯನ್ ಆಭರಣ, ಮುತ್ತು, ರೂಬಿ, ಹರಳು, ಪಚ್ಚೆ, ಹವಳಗಳು ತಳುಕು ಹಾಕಿಕೊಂಡು ಮತ್ತಷ್ಟು ಆಕರ್ಷಕವಾಗಿ ಕಾಣಲಾರಂಭಿಸಿದೆ. ಈ ಮೂಲಕ ಒಡವೆಗಳನ್ನು ಗ್ರಾಹಕರಿಗೆ ತಲುಪಿಸಲು ಆಭರಣ ಮಳಿಗೆಗಳು ಮುಂದಾಗಿವೆ. ಇದರ ಜತೆಗೆ ಪ್ರಾಚೀನ ಆಭರಣಗಳು, ವಧುವಿನ ಅಲಂಕಾರ ಸಂಗ್ರಹ, ನಿಜಾಮರ ಕಾಲದ ಒಡವೆಗಳು, ಹಗುರವಾದ ಆಭರಣ, ಟು–ಇನ್–ವನ್ ಒಡವೆ ಸಂಗ್ರಹ, ವಿಕ್ಟೋರಿಯನ್ ಆಭರಣ.. ಹೀಗೆ ಆಭರಣಗಳ ತರಾವರಿ ಸಂಗ್ರಹ ಫ್ಯಾಷನ್ ಜಗತ್ತಿನಲ್ಲಿ ರಾಯಭಾರ ನಡೆಸುತ್ತಿದೆ.

ಎಥ್ನಿಕ್ ಆಭರಣ, ಆಮ್ರಪಾಲಿ ಒಡವೆ, ಸಿಂಪಲ್ ಆಗಿರುವ ಆ್ಯಂಟಿಕ್ ಒಡವೆಗಳು ಕೂಡ ಮಹಿಳೆಯರಿಗೆ ಆಯ್ಕೆಯನ್ನು ಒದಗಿಸಿ ಮನಗೆಲ್ಲುತ್ತಿದೆ. ಫ್ಯಾಷನ್ ಪ್ರಪಂಚದಲ್ಲಿ ಒಡವೆಗಳು ಮಹಿಳೆಯರ ಕಣ್ಣು ಕೋರೈಸಿ ತಮ್ಮ ತಿಜೋರಿಯಲ್ಲಿ ಆದಷ್ಟು ಸೇರಿಸಿಕೊಳ್ಳುವ ಬಯಕೆ ಹುಟ್ಟಿಸುತ್ತಿದೆ.

ಬೆಂಗಳೂರಿನಲ್ಲಿರುವ ಒಡವೆ ವರ್ತಕರಿಗೆ ರಾಜ್ಯದ ನಾನಾ ಭಾಗಗಳಲ್ಲಿ ನೆಲೆಸಿರುವ ಜನರ ಆಭರಣ ಕ್ರೇಜ್‌ನ ಬಗೆಗಿನ ನಾಡಿಮಿಡಿತದ ಅರಿವಿದೆ. ಹೀಗಾಗಿ ಪ್ರಾದೇಶಿಕವಾಗಿಯೂ ಮಹಿಳೆಯರ ಮನಕ್ಕೊಪ್ಪುವ ಹಾಗೂ ಕಣ್ಮನ ಸೆಳೆಯುವ ಆಭರಣಗಳನ್ನು ತಯಾರಿಸಿ ಮಾರುಕಟ್ಟೆಗೆ ತರುತ್ತಾರೆ.

ಚಿನ್ನ ಯಾವತ್ತೂ ಹೆಣ್ಣಿನ ಭಾವನೆಗಳನ್ನು ಜೀವಂತವಾಗಿಸುತ್ತದೆ. ಹಳದಿ ಲೋಹದ ಮೇಲಿನ ವ್ಯಾಮೋಹವೂ ಮಹಿಳೆಯ ಮನಸ್ಸಿನಿಂದ ಎಂದಿಗೂ ದೂರವಾಗುವುದಿಲ್ಲ ಎಂಬ ಇಂಗಿತ ಅರಿತ ಜ್ಯುವೆಲ್ಲರಿ ವರ್ತಕರು ಪಾರಂಪರಿಕ ಹಾಗೂ ಸಮಕಾಲೀನ ವಿನ್ಯಾಸಗಳ ತರಹೇವಾರಿ ಆಭರಣಗಳನ್ನು ಒಡವೆ ಮೇಳ ಏರ್ಪಡಿಸಿ ಒಂದೇ ಸೂರಿನಡಿ ನೂರಾರು ವೈವಿಧ್ಯದ ಆಭರಣಗಳನ್ನು ಗ್ರಾಹಕರಿಗೆ ಸಿಗುವಂತೆ ಮಾಡುತ್ತಿದ್ದಾರೆ. ಇದಕ್ಕಾಗಿಯೇ 'ಜ್ಯುವೆಲ್ಸ್ ಆಫ್ ಇಂಡಿಯಾ' ಪ್ರತೀ ವರ್ಷ ಬೆಂಗಳೂರಿನಲ್ಲಿ ಆಭರಣ ಮೇಳ ಏರ್ಪಡಿಸುತ್ತಿದೆ. ಈ ನಿಟ್ಟಿನಲ್ಲಿ 'ಜ್ಯುವೆಲ್ಸ್ ಆಫ್ ಇಂಡಿಯಾ' ದ ರೂವಾರಿ ಸಂದೀಪ್ ಬೇಕಲ್ ಅವರ ಪ್ರಯತ್ನ ಸ್ತುತ್ಯರ್ಹ. ಈ ಬಾರಿ ನೃತ್ಯಗಾರ್ತಿ ಹಾಗೂ ನಟಿ ಲಕ್ಷ್ಮಿ ಗೋಪಾಲಸ್ವಾಮಿ ಜ್ಯುವೆಲ್ಸ್ ಆಫ್ ಇಂಡಿಯಾದ ಪ್ರಚಾರ ರಾಯಭಾರಿಯಾಗಿದ್ದರು. 'ಆಭರಣ ಬರೀ ಧರಿಸುವುದಕ್ಕಾಗಿ ಮಾತ್ರವಲ್ಲ, ಇವುಗಳ ವೈವಿಧ್ಯಮಯ ವಿನ್ಯಾಸದ ಸೊಬಗು ಹಾಗೂ ಚೆಲುವನ್ನು ಆಸ್ವಾದಿಸುವುದರಲ್ಲಿಯೂ ಖುಷಿಯಿದೆ' ಎಂಬ ಅಭಿಪ್ರಾಯ ಇವರದು. ■



ಲಕ್ಷ್ಮಿ ಗೋಪಾಲಸ್ವಾಮಿ

ಚಿತ್ರಕೃಪೆ: ಜ್ಯುವೆಲ್ಸ್ ಆಫ್ ಇಂಡಿಯಾ